# ಎಂದು ಬರಬಹುದು ನಿಮೋ?



ನೀರವ್ ಮೋದಿ (ನಿಮೋ) ಕೊನೆಗೂ ಲಂಡನ್ ಪೊಲೀಸರ ಕೈಗೆ ಸಿಕ್ಕಿದ್ದಾನೆ. ಸದ್ಯಕ್ಕೆ ವಾಂಡ್ಸ್‌ವರ್ಥ್‌ನಲ್ಲಿರುವ ವಿಕ್ಟೋರಿಯಾ ರಾಣಿಯ ಕಾಲದ ಹಳೇ ಜೈಲಿನಲ್ಲಿದ್ದಾನೆ. ಹೋಳಿ ಹಬ್ಬ ಅಲ್ಲೇ ಮುಗಿದಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಈತ ವಂಚಿಸಿರುವ ಸಾಲದ ಮೊತ್ತ 13000 ಕೋಟಿ ರೂಪಾಯಿ. ಜೊತೆಗೆ 2 ಶತಕೋಟಿ ಅಮೆರಿಕನ್ ಡಾಲರ್ ಮೊತ್ತದ ಅಕ್ರಮ ಹಣದ ವಿದೇಶಿ ವಹಿವಾಟು ನಡೆಸಿದ ಆರೋಪಗಳಿವೆ. ಭಾರತದಲ್ಲಿ 'ಮೋಸ್ಟ್ ವಾಂಟೆಡ್' ನೋಟಿಸ್ ಹೊರಡಿಸಲಾಗಿದೆ. ಇಂಟರ್‌ಪೋಲ್ ಮಾತ್ರವಲ್ಲ, ಅಮೆರಿಕ ಮತ್ತು ಕೆನಡಾದ ಪೊಲೀಸರೂ ಈತನನ್ನು ತನಿಖೆಗಾಗಿ ಹುಡುಕುತ್ತಿದ್ದಾರೆ. ಕಳೆದ ವರ್ಷ ಜನವರಿಯಲ್ಲಿ ಮಾವ ಮೆಹುಲ್ ಚೌಕ್ಸಿ ಜೊತೆ ಭಾರತ ಬಿಟ್ಟು ಪಲಾಯನ ಮಾಡಿದ್ದ ನೀರವ್ ಮೋದಿ, ಕಳೆದ ಒಂದು ವರ್ಷದಿಂದ ಲಂಡನ್ನಿನಲ್ಲೇ ವಾಸಿಸಿದ್ದ. ಇತ್ತೀಚೆಗೆ ಫುಟ್‌ಪಾತ್‌ನಲ್ಲಿ ನಡೆದುಹೋಗುತ್ತಿದ್ದ ಈತನನ್ನು ಗುರುತಿಸಿ 'ದಿ ಟೆಲಿಗ್ರಾಫ್' ಪತ್ರಿಕೆಯ ಪತ್ರಕರ್ತನೊಬ್ಬ ಮಾತನಾಡಿಸಿದ್ದು ಸುದ್ದಿಯಾಗಿತ್ತು. ಪ್ರಶ್ನೆಗಳಿಗೆಲ್ಲ 'ನೋ ಕಾಮೆಂಟ್ಸ್' ಎಂದು ಜಾರಿಕೊಂಡಿದ್ದ. ಪೊಲೀಸರ ಕೈಗೆ ಈತ ಸಿಕ್ಕಿಬೀಳಲು ಕಾರಣ ಸ್ಥಳೀಯ ಬ್ಯಾಂಕೊಂದರ ಕ್ಲರ್ಕ್. ಬ್ಯಾಂಕ್ ಖಾತೆ ತೆರೆಯಲು ಆ ಬ್ಯಾಂಕಿನೊಳಕ್ಕೆ ನಿಮೋ ಹೋಗಿದ್ದ. ಈತನ ಕುರಿತು ಪತ್ರಿಕೆಯಲ್ಲಿ ಓದಿದ್ದ ಆ ಕ್ಲರ್ಕ್ ಪೊಲೀಸರಿಗೆ ಫೋನ್ ಮಾಡಿದ. ಸ್ಕಾಟ್ಲೆಂಡ್‌ಯಾರ್ಡ್ ಪೊಲೀಸರು ಬಂದು ಬಂಧಿಸಿ ಕರೆದೊಯ್ದರು!

ಇನ್ನೀಗ ನಿಮೋನನ್ನು ಭಾರತಕ್ಕೆ ವಾಪಸ್ ಕರೆತರಲು ಎಷ್ಟು ಸಮಯ ಹಿಡಿಯಬಹುದು? ಹೇಳುವುದು ಕಷ್ಟ. ಈತನಿಗಿಂತ ಮುಂಚೆ ಉದ್ಯಮಿ ವಿಜಯ್ ಮಲ್ಯ ಕೂಡಾ ಹಲವು ಬ್ಯಾಂಕ್‌ಗಳಿಗೆ 9000 ಕೋಟಿ ರೂಪಾಯಿ ವಂಚಿಸಿ ಲಂಡನ್ನಿಗೆ ಪಲಾಯನ ಮಾಡಿದ್ದ. ರಾಜ್ಯಸಭೆಯ ಗೌರವಾನ್ವಿತ ಸದಸ್ಯನೂ ಆಗಿದ್ದ ಮಲ್ಯ ಪರಾರಿಯಾದದ್ದು 2016ರ ಮಾರ್ಚ್‌ನಲ್ಲಿ. ಲಂಡನ್ನಿನಲ್ಲಿ ಆತನ ಬಂಧನವಾಗಿ, ಭಾರತಕ್ಕೆ ಗಡೀಪಾರು ಮಾಡಿಸುವ ಪ್ರಕ್ರಿಯೆ ಶುರುವಾದದ್ದು 2017ರ ಏಪ್ರಿಲ್‌ನಲ್ಲಿ. ಎಲ್ಲ ವಿಚಾರಣೆ ಮುಗಿದು ಕೆಳನ್ಯಾಯಾಲಯ ಗಡೀಪಾರಿಗೆ ಆದೇಶ ನೀಡಿದ್ದರೂ, ಹೈಕೋರ್ಟ್‌ನಲ್ಲಿ ಮೇಲ್ಮನವಿಯ ವಿಚಾರಣೆ ಬಾಕಿ ಇದೆ. ಅಂದರೆ ಮಲ್ಯ ವಿರುದ್ಧದ ಅಲ್ಲಿನ ನ್ಯಾಯಾಲಯದ ಪ್ರಕ್ರಿಯೆ 2 ವರ್ಷಗಳಾದರೂ ಮುಗಿದಿಲ್ಲ. ಹಾಗಾಗಿ ನೀರವ್ ಮೋದಿ ಭಾರತಕ್ಕೆ ಎಂದು ಬರಬಹುದು ಎನ್ನುವುದನ್ನು ಈಗಲೇ ಹೇಳಲಾಗುವುದಿಲ್ಲ.

ಏಳೆಂಟು ವರ್ಷಗಳ ಹಿಂದೆ ನೀರವ್ ಮೋದಿ ಭಾರತದ ವಜ್ರಾಭರಣ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು. ಆಭರಣಗಳ ಡಿಸೈನರ್ ಮತ್ತು ವಜ್ರದ ವ್ಯಾಪಾರಿಯಾಗಿ ತನ್ನದೇ ಆದ ಸಾಮ್ರಾಜ್ಯ ಕಟ್ಟಿಕೊಂಡವ. ಇನ್ನೂ 40 ದಾಟುವುದರೊಳಗೇ ವಜ್ರೋದ್ಯಮದಲ್ಲಿ ಆತ ತಲುಪಿದ ಎತ್ತರ ಬಹಳಷ್ಟು ಜನ ಅಸೂಯೆಪಡುವಂತಿತ್ತು. ಈತ ಸ್ಥಾಪಿಸಿದ ಫೈರ್‌ಸ್ಟಾರ್ ಡೈಮಂಡ್ ಇಂಟರ್‌ನ್ಯಾಷನಲ್, ಗೀತಾಂಜಲಿ ಗ್ರೂಪ್ ಮತ್ತು ಖರೀದಿಸಿದ ಎ.ಜಾಫ್ ಇಂಕ್. ಸಂಸ್ಥೆಗಳು ತಮ್ಮದೇ ಆದ ಬ್ರ್ಯಾಂಡ್‌ಗಳಿಗಾಗಿ ಪ್ರಸಿದ್ಧಿ ಹೊಂದಿದ್ದವು. ಭಾರತದಲ್ಲಿ ರಿಯೊ ಟಿಂಟೊ ಕಂಪೆನಿಯ ಅರ್ಗೈಲ್ ಪಿಂಕ್ ಡೈಮಂಡ್‌ನ ಏಕೈಕ ವಿತರಕನಾಗಿದ್ದ. ಈ ಅರ್ಗೈಲ್ ಪಿಂಕ್ ಡೈಮಂಡ್ ಜಗತ್ತಿನಾದ್ಯಂತ ಹೆಸರುವಾಸಿ. ಒಟ್ಟು 63 ಹರಳುಗಳ ಅಪೂರ್ವ ಸಂಗ್ರಹವದು. ಒಂದು ಹರಳಿಗೇ 2 ಲಕ್ಷ ಡಾಲರ್ ಮೌಲ್ಯ! 2010ರಲ್ಲಿ ಈತ ವಿನ್ಯಾಸಗೊಳಿಸಿದ ಗೋಲ್ಕೊಂಡ ಲೋಟಸ್ ನೆಕ್ಲೇಸ್ 36 ಲಕ್ಷ ಅಮೆರಿಕನ್ ಡಾಲರ್‌ಗೆ ಹರಾಜಾಗಿತ್ತು. ದೆಹಲಿ, ಮುಂಬೈ, ಹಾಂಕಾಂಗ್, ನ್ಯೂಯಾರ್ಕ್ ಸಹಿತ ವಿಶ್ವದೆಲ್ಲೆಡೆ 19 ಷೋರೂಮ್‌ಗಳು ತಲೆಯೆತ್ತಿದ್ದವು. ರಾಜಕಾರಣಿಗಳು, ಅಧಿಕಾರಿಗಳು, ಬಾಲಿವುಡ್ ತಾರೆಯರು ಎಲ್ಲರಿಗೂ ಸೆಲೆಬ್ರಿಟಿ ಸ್ನೇಹಿತನಾದ. ಗೀತಾಂಜಲಿ ಬ್ರ್ಯಾಂಡ್ ವಜ್ರಗಳನ್ನು ಧರಿಸಿ ಪಾರ್ಟಿಗೆ ಹಾಜರಾಗುವುದೆಂದರೆ ಬಾಲಿವುಡ್ ತಾರೆಯರಿಗೆ ಪ್ರತಿಷ್ಠೆಯಾಗಿತ್ತು. ಅಜಮಾಸು 300 ದಶಲಕ್ಷ ಡಾಲರ್ ನಿವ್ವಳ ಆಸ್ತಿಯ ಒಡೆಯನಾಗಿದ್ದ.

ಈಗ 48ರ ಹರೆಯದ ನಿಮೋ, ಗಳಿಸಿರುವ ಎಲ್ಲ ಖ್ಯಾತಿಯೂ ಮಣ್ಣುಪಾಲಾಗಿದೆ. ಇಂಗ್ಲೆಂಡಿನ ಸೆಂಟ್ರಲ್ ಪಾಯಿಂಟ್‌ನ ಲಕ್ಸುರಿ ಅಪಾರ್ಟ್‌ಮೆಂಟಿನಲ್ಲಿ ವಾಸವಿದ್ದ ನೀರವ್ ಮೋದಿ, ಸದ್ಯ ಇರುವ ಜೈಲು, ಕುಡುಕರು, ಮಾದಕ ವ್ಯಸನಿಗಳು, ಕ್ರಿಮಿನಲ್‌ಗಳಿಂದ ತುಂಬಿ ತುಳುಕುತ್ತಿದೆ. 1430 ಪುರುಷ ಕೈದಿಗಳಿರುವ ಅಲ್ಲಿ ಒಬ್ಬರಿಗೆಂದೇ ಇರುವ ಸೆಲ್‌ನಲ್ಲಿ ಇಬ್ಬಿಬ್ಬರು ತುಂಬಿಕೊಂಡಿದ್ದಾರೆ. ಆ ಜೈಲಿನ ಏಕಾಂತಕ್ಕೆ ಬೇಸತ್ತು ಒಟ್ಟು 6 ಕೈದಿಗಳು ಜೀವ ಕಳೆದುಕೊಂಡಿದ್ದಿದೆ. ಅಲ್ಲಿನ ಸೆಲ್ ಒಳಗೆ ಜೈಲು ಸಿಬ್ಬಂದಿ ಒಬ್ಬರೇ ಹೋಗುವಂತಿಲ್ಲ ಎನ್ನುವ ಕಾನೂನೂ ಇದೆ. ಈಗ ಅಲ್ಲಿ ಕಂಬಿಗಳ ಹಿಂದೆ ಕುಳಿತಿದ್ದಾನೆ.

ನೀರವ್ ಪರ ವಕೀಲರು ಜಾಮೀನಿಗೆ ಇನ್ನಿಲ್ಲದ ಪ್ರಯತ್ನ ಪಟ್ಟಿದ್ದಾರೆ. 'ನಮ್ಮ ಕಕ್ಷಿದಾರ ಎಲ್ಲೂ ಓಡಿಹೋಗಲ್ಲ. ಲಂಡನ್ನಿನಲ್ಲಿ ಕಾನೂನುಬದ್ಧವಾಗಿಯೇ ವಾಸವಿದ್ದಾನೆ. ಆತನ ಬಳಿ ನ್ಯಾಷನಲ್ ಇನ್ಶೂರೆನ್ಸ್ ಪಾಲಿಸಿ ಇದೆ. ಪಾಲಿಕೆಗೆ ತೆರಿಗೆ ಕಟ್ಟುತ್ತಿದ್ದಾನೆ. ವಿಳಾಸದ ದೃಢೀಕರಣಕ್ಕೆ ಐಡಿ ಕಾರ್ಡ್ ಇದೆ. ಡ್ರೈವಿಂಗ್ ಲೈಸೆನ್ಸ್ ಸಲುವಾಗಿ ತನ್ನ ಬಳಿ ಇರುವ ಮೂರು ಪಾಸ್‌ಪೋರ್ಟ್‌ಗಳಲ್ಲಿ ಒಂದನ್ನು ಸಾರಿಗೆ ಅಧಿಕಾರಿಗಳಿಗೆ ಸಲ್ಲಿಸಿದ್ದಾನೆ. ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಆತನಿಗೆ ಆಹ್ವಾನಪತ್ರ ಬಂದಿದೆ' ಎಂದೆಲ್ಲ ವಕೀಲರು ಮಾಡಿದ ವಾದಕ್ಕೆ ನ್ಯಾಯಾಧೀಶರು ಮಾರುಹೋಗಿಲ್ಲ. ಜಾಮೀನು ನಿರಾಕರಿಸಿ ಜೈಲಿಗಟ್ಟಿದ್ದು ವಿಚಾರಣೆಯನ್ನು (ಮಾ.29) ಮುಂದೂಡಿದ್ದಾರೆ. ನಾಳೆ ಏನಾಗುತ್ತೋ ನೋಡಬೇಕು.

■ **ಹನಿ**

**ಸೂಚನೆ: ಪುಟ 18, 22, 23, 26, 34ರಲ್ಲಿನ ಬರಹಗಳು ಏಪ್ರಿಲ್ 1ರ 'ನಗೆ ದಿನ'ದ ಹಿನ್ನೆಲೆಯಲ್ಲಿ ರೂಪುಗೊಂಡ ಕಾಲ್ಪನಿಕ ರಚನೆಗಳು.**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65